# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 201 |
| ಸದಸ್ಯರ ಹೆಸರು | ಶ್ರೀ ಯು.ಬಿ.ವೆಂಕಟೇಶ್ |
| ಉತ್ತರಿಸುವ ದಿನಾಂಕ | 06-12-2023 |
| ಉತ್ತರಿಸುವವರು | ಸಾರಿಗೆ ಮತ್ತು ಮುಜರಾಯಿ ಸಚಿವರು |

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿರುವ "ಎ" "ಬಿ" ಮತ್ತು "ಸಿ" ವರ್ಗದ ಮುಜರಾಯಿ ದೇವಸ್ಥಾನಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ದೇವಸ್ಥಾನವಾರು ಹೆಸರುಗಳ ಪಟ್ಟಿಯನ್ನು ನೀಡುವುದು) | ರಾಜ್ಯದಲ್ಲಿ ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿ ಒಟ್ಟು 34,563 ಅಧಿಸೂಚಿತ ದೇವಾಲಯಗಳಿರುತ್ತವೆ. ವಿವರ ಈ ಕೆಳಕಂಡಂತಿದೆ.<br><br>(see table below)<br><br>ಸದರಿ ಅಧಿಸೂಚಿತ ಸಂಸ್ಥೆಗಳ ಜಿಲ್ಲಾವಾರು ಮಾಹಿತಿಯನ್ನು **ಸಿ.ಡಿ. ಯಲ್ಲಿ** ಒದಗಿಸಿದೆ. |
| ಆ) | ಮುಜರಾಯಿ ದೇವಸ್ಥಾನಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅರ್ಚಕರುಗಳ ಸಂಖ್ಯೆ ಎಷ್ಟು; ಅರ್ಚಕರುಗಳಿಗೆ ಸರ್ಕಾರ ನೀಡುತ್ತಿರುವ ಸೌಲಭ್ಯಗಳಾವುವು; ವಯೋನಿವೃತ್ತಿ ಅರ್ಚಕರುಗಳಿಗೆ ನೀಡುತ್ತಿರುವ ಭತ್ಯೆಯ ಪ್ರಮಾಣ ಎಷ್ಟು; ಅರ್ಚಕರುಗಳ ಕುಟುಂಬ ವರ್ಗದವರಿಗೆ ಆರೋಗ್ಯ ಸಂಬಂಧಿ ಯೋಜನೆಗಳನ್ನು ಜಾರಿ ಗೊಳಿಸಲಾಗಿದೆಯೇ; (ಸಂಪೂರ್ಣ ಮಾಹಿತಿಯನ್ನು ನೀಡುವುದು) | ಧಾರ್ಮಿಕ ದತ್ತಿ ಇಲಾಖಾ ವ್ಯಾಪಿಯ ದೇವಸ್ಥಾನಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅರ್ಚಕರುಗಳ ಒಟ್ಟು ಸಂಖ್ಯೆ-31,831.<br><br>ಆದಾಯವಿರುವ "ಎ" ವರ್ಗದ ದೇವಾಲಯಗಳ ಅರ್ಚಕರುಗಳಿಗೆ ವೇತನ ಶ್ರೇಣಿ ರೂ.27,650-52,650 ಗಳನ್ನು ನಿಗದಿಪಡಿಸಲಾಗುತ್ತಿದೆ ಹಾಗೂ ಆದಾಯ ಕಡಿಮೆ ಇರುವ ಕೆಲವು "ಎ" ಮತು "ಬಿ" ವರ್ಗದ ದೇವಾಲಯಗಳಲ್ಲಿ ನಿಯಮದಲ್ಲಿ ಅವಕಾಶ ಇರುವಂತೆ ವಾರ್ಷಿಕ ಆದಾಯದಲ್ಲಿ ಸಿಬ್ಬಂದಿ ವೆಚ್ಚವು ಶೇಕಡ 35 ರಷ್ಟು ಮೀರದಂತೆ ವೇತನ ನಿಗದಿಪಡಿಸಿ ನೀಡಲಾಗುತ್ತಿದೆ ಮತ್ತು "ಸಿ" ವರ್ಗದ ದೇವಾಲಯಗಳಿಗೆ ವಾರ್ಷಿಕ ರೂ.60,000-00 ಗಳ ತಸ್ತೀಕ್/ ವರ್ಷಾಸನ ನೀಡಲಾಗುತ್ತಿದೆ. |

| ಪ್ರವರ್ಗ | ವಿವರ | ಸಂಸ್ಥೆಗಳ ಸಂಖ್ಯೆ |
|---|---|---|
| ಎ | ವಾರ್ಷಿಕ ವರಮಾನವು ರೂ. ಇಪ್ಪತ್ತೈದು ಲಕ್ಷಗಳನ್ನು ಮೀರಿದ ಸಂಸ್ಥೆಗಳು | 205 |
| ಬಿ | ವಾರ್ಷಿಕ ವರಮಾನವು ರೂ. ಐದು ಲಕ್ಷಗಳನ್ನು ಮೀರಿ ರೂ. ಇಪ್ಪತ್ತೈದು ಲಕ್ಷ ಗಳನ್ನು ಮೀರದ ಸಂಸ್ಥೆಗಳು | 193 |
| ಸಿ | ವಾರ್ಷಿಕ ವರಮಾನವು ರೂ. ಐದು ಲಕ್ಷಗಳನ್ನು ಮೀರದ ಸಂಸ್ಥೆಗಳು | 34165 |
| | **ಒಟ್ಟು** | **34563** |

ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಯಲ್ಲಿ ಬರುವ ದೇವಾಲಯಗಳ ಅರ್ಚಕರಿಗೆ ಪ್ರಸಕ್ತ ಸಾಲಿನಲ್ಲಿ ಈ ಕೆಳಕಂಡ ಸೌಲಭ್ಯಗಳನ್ನು ಕಲ್ಪಿಸಲಾಗಿದೆ.

1) ತಸ್ತೀಕ್ ಹಣವನ್ನು ನೇರವಾಗಿ ಅರ್ಚಕರ ಖಾತೆಗೆ ಡಿಬಿಟಿ ಮೂಲಕ ವರ್ಗಾವಣೆ ಮಾಡಲು ಕ್ರಮ ವಹಿಸಲಾಗಿದೆ.

2) ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಯಲ್ಲಿ ಬರುವ ಪ್ರವರ್ಗ 'ಸಿ' ಅಧಿಸೂಚಿತ ದೇವಾಲಯಗಳಿಗೆ ಕರ್ತವ್ಯ ನಿರ್ವಹಿಸುತ್ತಿರುವ ಅರ್ಚಕರು/ ನೌಕರರು ಮೃತಪಟ್ಟಲ್ಲಿ, ಅವರ ಕುಟುಂಬದವರಿಗೆ ರೂ.2.00ಲಕ್ಷಗಳ ಪರಿಹಾರವನ್ನು ಪಾವತಿಸಲು ಕ್ರಮವಹಿಸಲಾಗಿದೆ.

3) ಕರ್ನಾಟಕ ಭಾರತ್ ಗೌರವ್ ಕಾಶಿ ಗಯಾ ಯಾತ್ರಿಗೆ ಪ್ರವರ್ಗ 'ಸಿ 'ಅಧಿಸೂಚಿತ ದೇವಾಲಯಗಳ ಅರ್ಚಕರು /ನೌಕರರು ಮತ್ತು ಅವರ ಕುಟುಂಬದ ಒಬ್ಬರನ್ನು ಉಚಿತವಾಗಿ ಕಳುಹಿಸಲು ಕ್ರಮವಹಿಸಲಾಗಿದೆ.

4) ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಅಧಿಸೂಚಿತ ದೇವಾಲಯಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅರ್ಚಕರು ಮತ್ತು ನೌಕರರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಪ್ರೋತ್ಸಾಹ ಧನವನ್ನು ಜನವರಿ ಮಾಹೆಯಿಂದ ವಿತರಿಸಲು ಕ್ರಮವಹಿಸಲಾಗಿದೆ.

5) ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಯಲ್ಲಿ ಬರುವ ಪ್ರವರ್ಗ 'ಸಿ' ಅಧಿಸೂಚಿತ ದೇವಾಲಯಗಳಲ್ಲಿನ ಅರ್ಚಕರು ನಿಧನ / ಅರ್ಚಕರು ವಯಸ್ಸಾದ ಸಂದರ್ಭದಲ್ಲಿ / ತೀವ್ರ ಅನಾರೋಗ್ಯದ ನಿಮಿತ್ತ ಕರ್ತವ್ಯ ನಿರ್ವಹಿಸಲು ಸಾಧ್ಯವಾಗದೇ ಇರುವ ಸಂದರ್ಭದಲ್ಲಿ ಅನುವಂಶಿಕ ಹಕ್ಕನ್ನು ಕಾನೂನು ಬದ್ಧ ವಾರಸುದಾರರಿಗೆ ತಹಶೀಲ್ದಾರ್ ಹಂತದಲ್ಲಿ ವರ್ಗಾಯಿಸಲು ಅಧಿಕಾರ ಪ್ರತ್ಯಾಯೋಜಿಸಲಾಗಿದೆ.

6) ವಯೋನಿವೃತ್ತ ಅರ್ಚಕರುಗಳಿಗೆ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿಗಳ ನಿಯಮಗಳು 2002ರ ನಿಯಮ 16 ರಂತೆ ಪಿ.ಎಫ್ ಸೌಲಭ್ಯ ಹೊಂದಿರುವ ಅಧಿಸೂಚಿತ ಸಂಸ್ಥೆಯಿಂದ ಯಾವುದೇ ಭವಿಷ್ಯ ನಿಧಿ ಅಥವಾ ವಿಮಾ ನಿಧಿ ಸೌಲಭ್ಯ ಅಥವಾ ಅವೆರಡು ನೀಡದಿರುವಲ್ಲಿ, ಗರಿಷ್ಠ ರೂ.50,000/- ರೂಪಾಯಿಗೊಳ್ಳಪಟ್ಟು ಮತ್ತು ಅಧಿಸೂಚಿತ ಸಂಸ್ಥೆಯಿಂದ ಭವಿಷ್ಯ ನಿಧಿ ಮತ್ತು ವಿಮಾ ಸೌಲಭ್ಯಗಳನ್ನು ನೀಡಿರುವಲ್ಲಿ, ಗರಿಷ್ಠ ರೂ.35,000/-ಗಳಿಗೊಳ್ಳಪಟ್ಟು ಪೂರ್ಣಗೊಳಿಸಿದ ಸೇವೆಯ ಪ್ರತಿಯೊಂದು ವರ್ಷಕ್ಕೆ 15 ದಿನಗಳ ವೇತನ ನೀಡಲಾಗುತ್ತಿದ್ದು, ಇದನ್ನು ಗರಿಷ್ಠ ರೂ.2.00ಲಕ್ಷಗಳಿಗೆ ಹೆಚ್ಚಿಸಲು ಅಗತ್ಯ ತಿದ್ದುಪಡಿಯನ್ನು ತರಲು ಕ್ರಮವಹಿಸಲಾಗಿದೆ.

7) ಅರ್ಚಕರುಗಳ ಕುಟುಂಬ ವರ್ಗದವರಿಗೆ ಆಯುಶ್ಮಾನ್ ಭಾರತ್ ಯೋಜನೆಯಡಿ ಆರೋಗ್ಯ ಕಾರ್ಡನ್ನು ಇಲಾಖಾ ವತಿಯಿಂದ ವಿತರಿಸಲು ಕ್ರಮವಹಿಸಲಾಗುತ್ತಿದೆ.

| | | |
|---|---|---|
| ಇ | ಮುಜರಾಯಿ ದೇವಸ್ಥಾನಗಳ ಪ್ರದೇಶಗಳಲ್ಲಿ ಅರ್ಚಕರುಗಳ ವಾಸಕ್ಕೆ ಅನುಕೂಲವಾಗುವಂತೆ ಗೃಹ ನಿರ್ಮಾಣ ಮಾಡಿ ಹಂಚಿಕೆ ಮಾಡುವ ಯೋಜನೆಯನ್ನು ಹೊಂದಿದೆಯೇ; | ರಾಜ್ಯ ಧಾರ್ಮಿಕ ಪರಿಷತ್ತಿನ ದಿನಾಂಕ:13-10-2023ರ ಸಭೆಯಲ್ಲಿ ವಿಷಯ ಸೂಚಿ ಸಂಖ್ಯೆ 37 ರಲ್ಲಿ "ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಯಲ್ಲಿ ಬರುವ ಅಧಿಸೂಚಿತ ದೇವಾಲಯ/ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅರ್ಚಕರಿಗೆ ದೇವಾಲಯಗಳ ಬಳಿ ಸ್ಥಳಾವಕಾಶದ ಲಭ್ಯತೆಗೆ ಅನುಗುಣವಾಗಿ ವಸತಿ ಇಲಾಖೆಯ ಸಹಯೋಗದೊಂದಿಗೆ ವಸತಿ ಸೌಲಭ್ಯವನ್ನು ಕಲ್ಪಿಸಲು ಹಾಗೂ ಇದಕ್ಕೆ ತಗಲುವ ವೆಚ್ಚವನ್ನು ಸಾಮಾನ್ಯ ಸಂಗ್ರಹಣಾ ನಿಧಿಯಿಂದ ಭರಿಸಲು ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ.<br><br>ಸದರಿ ನಡವಳಿಯಂತೆ ಅರ್ಚಕರಿಗೆ ವಸತಿ ಸೌಲಭ್ಯಗಳನ್ನು ಕಲ್ಪಿಸುವ ಸಂಬಂಧ ಮುಜರಾಯಿ ದೇವಸ್ಥಾನಗಳ ಪ್ರದೇಶಗಳಲ್ಲಿ ಅರ್ಚಕರುಗಳ ವಾಸಕ್ಕೆ ಅನುಕೂಲವಾಗುವಂತೆ ವಸತಿ ಇಲಾಖೆಯ ಸಹಭಾಗಿತ್ವದಲ್ಲಿ ಗೃಹ ನಿರ್ಮಾಣ ಮಾಡುವ ಬಗ್ಗೆ ಪರಿಶೀಲಿಸಲಾಗುತ್ತಿದೆ. |
| ಈ | ಹಾಗಿದ್ದಲ್ಲಿ, ಈ ಯೋಜನೆಯ ರೂಪ ರೇಷಗಳೇನು? (ಸಂಪೂರ್ಣ ವಿವರವನ್ನು ನೀಡುವುದು) | |

ಸಂಖ್ಯೆ: ಕಂಇ 113 ಮುಸಪು 2023

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು